# ಇರುವೆ–ಬದುಕು

■ ಎಸ್.ಎನ್. ಚಂದ್ರಕಲಾ ಕೊಪ್ಪ

ಇರುವೆ ಇರುವೆ
ಕರಿಯಾ ಇರುವೆ
ನಮ್ಮಯ ಬದುಕಿಗೆ ಮಾದರಿಯು

ಸಾಲಲಿ ಸಾಗುವೆ
ಒಟ್ಟಿಗೆ ಬಾಳುವೆ
ಸೇರಿ ದುಡಿವಾ ದ್ಯೋತಕವು

ಇರುವೆ ತೋರುವ
ಚೊಕ್ಕ ನಡೆಯದು
ಕ್ರಮ ಶಿಕ್ಷಣದ ಸಾದರವು

ಇರುವೆ ಹೊರುವಾ
ಭಾರವು ಹೆಚ್ಚದು
ಶ್ರಮದ ದುಡಿಮೆಯ ಪ್ರತೀಕವು

ಆಳಕೆ ತೋಡುವೆ
ಗೂಡನು ಮಾಡುವೆ
ಸಹ ಬಾಳಿಗೆ ನೀ ನಿದರ್ಶನವು

ಕಾಳನು ಕೂಡುವೆ
ಪಾಲನು ಕೊಡುವೆ
ಸಮಪಾಲಿಗೆ ನೀ ಸಹಕಾರಿಯು

ವಾಸನೆ ಹಿಡಿವೆ
ಸಿಹಿಯಾ ಅಪ್ಪುವೆ
ಜೀವನ ನೀತಿಗೆ ಸಾಧನವು

ಅರಿವೇ ಗುರುವು
ಬಾಳಿನ ಗೆಲುವು
ನಮ್ಮಯ ಜೀವಿತ ಸಾರ್ಥಕವು

■



ಗಣೇಶ್ ಅರಳೀಕಟ್ಟೆ

# ಅಪ್ಪನ ಕಾರು

■ ಮಹಾಂತೇಶ ಮಾಗನೂರ

ಅಜ್ಜನ ಮನೆಗೆ ಹಬ್ಬಕ್ಕೆ ಹೋದೆ
ಮಳೆಯು ತುಂಬಾ ಜೋರು
ಜಿಟಿ ಜಿಟಿ ಮಳೆಗೆ
ದಾರಿಯ ತುಂಬ ಬಲು ಕೆಸರು
ರಸ್ತೆಯಲ್ಲಿ ಇಲ್ಲದ ಟಾರು
ಚಲಿಸಿತ್ತು ಅಪ್ಪನ ಮೋಟಾರು
ಸ್ವಲ್ಪವೇ ದೂರ ಓಡಿ
ಸಿಕ್ಕಿಬಿತ್ತು ಕೆಸರಲ್ಲಿ ಕಾರು
ಪಟ್ಟೆವು ಹರಸಾಹಸ, ಬೇಕಾಯ್ತು
ತಳ್ಳಲು ಜನ ನಾಲ್ಕಾರು
ಅಬ್ಬಾ, ಕೊನೆಗೂ ಆಯಿತು
ಕೆಸರಿನಿಂದ ನಮ್ಮ ಕಾರು ಪಾರು
ಮೆತ್ತಿದ ಮಣ್ಣಿಗೆ, ಕಾರಿನ
ಗಾಲಿಗಳೆಲ್ಲ ಏರುಪೇರು
ಉಜ್ಜಿ ಉಜ್ಜಿ ತೊಳೆಯಲು
ಹಾಕಿದೆವು ಅಜ್ಜನ ಮನೆಯ ನೀರು
ಅಭ್ಯಂಗ ಸ್ನಾನದಿ ಥಳ ಥಳ
ಹೊಳೆಯುತಲಿತ್ತು ಅಪ್ಪನ ಕಾರು

■